**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.554/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜು | ಸಿ.ಡಬ್ಲ್ಯು-3 |
| ತಂದೆಯ ಹೆಸರು / ಗಂಡನ ಹೆಸರು | : | ಮೂಗಯ್ಯ | ಪಿ.ಡಬ್ಲ್ಯು-3 |
| ವಯಸ್ಸು | : | 55 ವರ್ಷ | - |
| ಉದ್ಯೋಗ | : | ಕೂಲಿ ಕೆಲಸ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **08.02.2024.** |
| ವಾಸಸ್ಥಳ | : | ಬೋರೇದೇವರಮುಂಟಿ ಗ್ರಾಮ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ಸಹಿಯು ತಮ್ಮದೇ ಎಂದು ನೋಡಿ ಗುರುತಿಸುವಂತೆ ಹೇಳಿದ್ದು ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-1(ಸಿ)** ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿಃ 19.01.2017 ರಂದು ಸಂಜೆ 7.15 ರಿಂದ ರಾತ್ರಿ 8.15 ರವರೆಗೆ ಅಂತರಸಂತೆ ಹೋಬಳಿಯ ಬೋರೇದೇವರಮುಂಟಿ ಗ್ರಾಮದ ಆರೋಪಿಯ ಮನೆಯ ಮುಂದೆ ಚಾಸಾ-1 ರವರ ಇರ್ಯಾದೆಯ ಮೇರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪೊಲೀಸರು ಆರೋಪಿಯ ಬಾಬ್ತು 90 ಎಂ.ಎಲ್ ನ 50 ವಿಂಡ್ಸರ್ ಡೀಲಕ್ಸ್ ವಿಸ್ಕಿ ಪೌಚುಗಳು, ಒಂದು ಪ್ಲಾಸ್ಟಿಕ್ ಚೀಲ ಮತ್ತು ರೂ.200/- ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನಾ ದಿನದಂದು ಚಾಸಾ-1 ರವರ ಜೊತೆ ದಾಳಿಯಲ್ಲಿ ಭಾಗವಹಿಸಿ ಆರೋಪಿಯನ್ನು ನನ್ನ ಸಮಕ್ಷಮ ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿ ಕೇಳಿಕೊಂಡ **ನಿ.ಪಿ-5** ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**